**KOF**
Since 1984

# ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ನಿಯಮಿತ

Safal

ಕೇಂದ್ರ ಕಛೇರಿ: ನಂ. 11, 4ನೇ ಮಹಡಿ, ಬ್ಲೂಕ್ರಾಸ್ ಛೇಂಬರ್ಸ್, ಇನ್‌ಫ್ಯಾಂಟ್ರ ಅಡ್ಡ ರಸ್ತೆ, ಬೆಂಗಳೂರು-560001
ಫೋನ್: 080-25550268, 25583061, ಇ-ಮೇಲ್: hrd@kof.co.in

ಕ್ರ.ಸಂ: ಕೆಓಎಫ್:ಮಾಸಅ:ನೇಪ್ರ/126/2021-22/ ದಿನಾಂಕ: 07.05.2021

## ನೇಮಕಾತಿ ಪ್ರಕಟಣೆ

**ಜನರಲ್ ಮ್ಯಾನೇಜರ್ - 01 ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**
**ವೇತನ ಶ್ರೇಣಿ: ರೂ.1,04,600/- ರಿಂದ ರೂ.1,50,600/- + ಅನ್ವಯಿಸುವ ಭತ್ಯೆಗಳು**

### ವಿದ್ಯಾರ್ಹತೆ ಮತ್ತು ಅನುಭವ

ಎ) ಅಂಗೀಕೃತ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದಿಂದ ಎಂ.ಎಸ್ಸಿ., ಕೃಷಿ (ಕೃಷಿ ಮಾರಾಟ/ಬೀಜ ತಂತ್ರಜ್ಞಾನ/ಆಗ್ರೋನಮಿ/ಅಗ್ರಿಕಲ್ಚರ್ ಎಕ್ಸಟೆನ್ಷನ್/ ಅಗ್ರಿಕಲ್ಚರಲ್ ಎಕನಾಮಿಕ್ಸ್ /ಸಾಯಿಲ್ ಸೈನ್ಸ್ ವಿಷಯದಲ್ಲಿ ಸ್ನಾತಕೋತರ ಪದವಿ)

ಅಥವಾ

ಇಂಡಿಯನ್ ಇನ್‌ಸ್ಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ / ಇನ್‌ಸ್ಟ್ಯೂಟ್ ಆಫ್ ರೂರಲ್ ಮ್ಯಾನೇಜ್‌ಮೆಂಟ್, ಆನಂದ್, ಗುಜರಾತ್ / ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಅಡ್ಮಿನಿಸ್ಟ್ರೇಷನ್ / ಫೈನಾನ್ಸ್ / ಮಾರ್ಕೆಟಿಂಗ್ / ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ / ಕೃಷಿ ವಿಷಯದಲ್ಲಿ ಎಂ.ಬಿ.ಎ ಸ್ನಾತಕೋತರ ಪದವಿ.

ಬಿ) ಕಂಪ್ಯೂಟರ್ ನಿರ್ವಹಣೆಯನ್ನು ಒಳಗೊಂಡಂತೆ ಕಂಪ್ಯೂಟರ್ ಕಾರ್ಯಾಚರಣೆಯ ಪೂರ್ಣ ಪರಿಜ್ಞಾನ ಹೊಂದಿರತಕ್ಕದ್ದು.

ಅನುಭವ: ಪ್ರತಿಷ್ಠಿತ ಸಂಸ್ಥೆಯೊಂದರ ಹಿರಿಯ ಹುದ್ದೆಯಲ್ಲಿ ಕನಿಷ್ಠ 8 ವರ್ಷಗಳ ಅನುಭವ, ಇದರಲ್ಲಿ ಪೂರ್ಣಾಧಿಕಾರವುಳ್ಳ ಸ್ವತಂತ್ರ ಹಿರಿಯ ಹುದ್ದೆಯಲ್ಲಿ ಕನಿಷ್ಠ 5 ವರ್ಷಗಳ ಅನುಭವ ಹೊಂದಿರತಕ್ಕದ್ದು.

**ವಯೋಮಿತಿ :** ಕನಿಷ್ಠ-34, ಗರಿಷ್ಠ-50 ವರ್ಷಗಳು

**ಆಯ್ಕೆ ವಿಧಾನ :** ಅಭ್ಯರ್ಥಿಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆ, ಕೆಲಸದ ಅನುಭವ, ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಪರಿಗಣಿಸಿ, ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

**ಅರ್ಜಿ ಶುಲ್ಕ :** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1 ಇವರಿಗೆ ರೂ. 500/- ಮತ್ತು ಸಾಮಾನ್ಯ ವರ್ಗದವರಗೆ ರೂ.1000/- ಅರ್ಜಿ ಶುಲ್ಕವನ್ನು ಕೆ.ಸಿ.ಓ.ಜಿ.ಎಫ್.ಲಿ., ಬೆಂಗಳೂರು ಇವರ ಹೆಸರಿಗೆ ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನ ಡಿ.ಡಿ.ಯ ಮೂಲಕ ಸಲ್ಲಿಸುವುದು.

**ಸಾಮಾನ್ಯ ನಿಬಂಧನೆಗಳು:**

(1) ಕನ್ನಡ ಭಾಷಾಜ್ಞಾನ ಹಾಗೂ ಕಂಪ್ಯೂಟರ್ ಜ್ಞಾನ ಕಡ್ಡಾಯವಾಗಿರುತ್ತದೆ. ವಿದ್ಯಾರ್ಹತೆ, ಅನುಭವ, ವಯಸ್ಸು ಹಾಗೂ ಮೀಸಲಾತಿಗೆ ಸಂಬಂಧಿಸಿದಂತೆ ಪ್ರತಿಗಳನ್ನು ಲಗತ್ತಿಸತಕ್ಕದು. (2) ಮುಕ್ತ ವಿಶ್ವವಿದ್ಯಾನಿಲಯದಿಂದ (Distance Education, Correspondence Course) ಪಡೆದ ಪದವಿ, ಸ್ನಾತಕೋತರ ಪದವಿಗಳನ್ನು ಪರಿಗಣಿಸಲಾಗುವುದಿಲ್ಲ. (3) ಆಯ್ಕೆಯಾದ ಅಭ್ಯರ್ಥಿಯನ್ನು ಕರ್ನಾಟಕ ರಾಜ್ಯ ಅಥವಾ ರಾಜ್ಯದ ಹೊರಗು ನೇಮಕಾತಿ ಮತ್ತು ವರ್ಗಾವಣೆ ಮಾಡಲು ಅವಕಾಶವಿರುತ್ತದೆ. (4) ಸೇವೆಯಲ್ಲಿರತಕ್ಕ ಅಭ್ಯರ್ಥಿಗಳು, ಸಂಬಂಧಪಟ್ಟ ಇಲಾಖೆಯ ಮೂಲಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. (5) ಸ್ವ ವಿವರ ಹಾಗು ಭಾವಚಿತ್ರದೊಂದಿಗೆ ಎಲ್ಲಾ ದಾಖಲಾತಿಗಳನ್ನು ಒಳಗೊಂಡ ಅರ್ಜಿಯನ್ನು **ವ್ಯವಸ್ಥಾಪಕ ನಿರ್ದೇಶಕರು, ಕೆ.ಸಿ.ಓ.ಜಿ.ಎಫ್.ಲಿ. ನಂ.11, 4ನೇ ಮಹಡಿ, ಬ್ಲ್ಯೂ ಕ್ರಾಸ್ ಛೇಂಬರ್ಸ್, ಇನ್‌ಫೆಂಟ್ರಿ ಅಡ್ಡರಸ್ತೆ, ಬೆಂಗಳೂರು - 01** ಈ ವಿಳಾಸಕ್ಕೆ ನೇಮಕಾತಿ ಪ್ರಕಟಿತ ದಿನಾಂಕದಿಂದ 21 ದಿನಗಳೊಳಗೆ ಅಂದರೆ ದಿನಾಂಕ 29.05.2021 ಸಂಜೆ 5.30ರೊಳಗೆ ತಲುಪುವಂತಿರಬೇಕು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. (6) ಲಕೋಟೆಯ ಮೇಲೆ **"ಜನರಲ್ ಮ್ಯಾನೇಜರ್ ಹುದ್ದೆಗೆ ಅರ್ಜಿ"** ಎಂಬುದನ್ನು ನಮೂದಿಸುವುದು. (7) ಅಪೂರ್ಣ/ಶುಲ್ಕವಿಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಸಹಿ/- ವ್ಯವಸ್ಥಾಪಕ ನಿರ್ದೇಶಕರು
ಕೆಓಎಫ್, ಬೆಂಗಳೂರು